ಸಭ್ಯತೆಗಳಿಂದ ಕೂಡಿದ ಆಕ್ರಮಣಶೀಲವಾದ ಬೌದ್ಧಿಕಗರ್ವವನ್ನೂ ತುಂಟತನವನ್ನೂ ರೂಢಿಸಿಕೊಳ್ಳುವ ಮೂಲಕ ಅವರು ಈ ಖಿನ್ನತೆಯನ್ನು ಅಡಗಿಸಲು ಯತ್ನಿಸಿದರು. ಹೀಗಿದ್ದರೂ ಅವರು ತಮ್ಮ ಸಮಯದಲ್ಲಿ, ಜ್ಞಾನದಲ್ಲಿ, ಸೊತ್ತಿನಲ್ಲಿ, ಭಾವನಾತ್ಮಕತೆ ಮತ್ತು ಪ್ರೀತಿ ವಿಶ್ವಾಸಗಳಲ್ಲಿ ಉದಾರವಾಗಿದ್ದರು. ತಮ್ಮ ವ್ಯಕ್ತಿತ್ವ ಮತ್ತು ಗುಣಸ್ವಭಾವದಲ್ಲಿ, ಸ್ವಾಭಾವಿಕವಾಗಿ ಮಧುರ ಭಾವನೆ ಮತ್ತು ಸಂಜ್ಞೆಗಳಿಗೆ ಪೂರಕವಾಗಿ ಸ್ಪಂದಿಸಲು ತಕ್ಕ ಸಾಮರ್ಥ್ಯ ತಮ್ಮಲ್ಲಿ ಇಲ್ಲದಿರುವುದನ್ನು ಕಂಡುಕೊಂಡಿದ್ದರು.

ಅವರ ಈ ಪ್ರವೃತ್ತಿ, ನಿರಂತರವಾಗಿ ತೊಡರುಗಳನ್ನು ನಿರ್ಮಿಸಿ, ಮಹಿಳೆಯರೊಂದಿಗಿನ ಸಂಬಂಧಗಳನ್ನು ಬಿಗಡಾಯಿಸಿತು. ಪರಿಣಾಮವೆಂದರೆ, ಅವರೇ ಸ್ನೇಹ ಬೆಳೆಸಲೆತ್ನಿಸಿದ ಅಥವಾ ತಾವಾಗಿಯೇ ಅವರ ಸ್ನೇಹಕ್ಕಾಗಿ ಹಾತೊರೆದ ಮಹಿಳೆಯರು, ಅವರಿಂದ ಆಕರ್ಷಿತರಾದರೂ ಕಡೆಗೆ ಮುಖದಿರುಹಿದರು. ಇದು ಪ್ರಭಾಕರರ ಭಾವನಾತ್ಮಕ ಬಾಳಿನ ಶುಷ್ಕ ಮತ್ತು ಗೊಂದಲಕರ ಅವಸ್ಥೆಯನ್ನೂ, ಅವರ ಏಕಾಂಗಿತನವನ್ನೂ, ಒಳವ್ಯಕ್ತಿತ್ವದ, ವಿಕ್ಷಿಪ್ತ, ತಿರುಚಿದ ಮತ್ತು ಅನಾಕರ್ಷಕ ಒಳಮುಖವನ್ನೂ ವಿವರಿಸಬಲ್ಲದು. ಹೀಗೆ ಒಂಟಿಯಾಗಿರುವ ಶಾಪಗ್ರಸ್ತ ಅವಸ್ಥೆಯಲ್ಲೇ ಅವರು ಕೊನೆಯುಸಿರೆಳೆದರು.

ಪ್ರಭಾಕರ ಪ್ರಾಯದಲ್ಲಿರುವಾಗ, ಕನ್ನಡದ ಮೈನರ್ ಲೇಖಕನೆಂದು ತಕ್ಕಮಟ್ಟಿನ ಮನ್ನಣೆ ಪಡೆದರು. 'ಕಾಮರೂಪಿ' ಹೆಸರಿನಲ್ಲಿ ಪ್ರಕಟವಾದ ಅವರ ಮೂರು ಪುಸ್ತಕಗಳಲ್ಲಿ ಒಂದು ಸಣ್ಣಕಥಾ ಸಂಕಲನವಿದೆ. ಎರಡು ಕಾದಂಬರಿಗಳಿವೆ. ಅವರು ಕಾವ್ಯರಚನೆಗೆ ಮಾಡಿದ ಏಕೈಕ ಯತ್ನದ ಫಲವಾಗಿ ಮೂರು ಕವಿತೆಗಳು ಇದೇ ಕಾವ್ಯನಾಮದಲ್ಲಿ ಪ್ರಕಟವಾಗಿದೆ. ಅವುಗಳಲ್ಲಿ ಒಂದು ಆಂಗ್ರೇಜಿಗೆ ತರ್ಜುಮೆಯಾಗಿದೆ. ಅವರು 'ವರ್ಡ್ಸ್ ಅಂಡ್ ಐಡಿಯಾಸ್' (2007) ಎಂಬ ಲಘುಪ್ರಬಂಧಗಳ ಸಂಕಲನವನ್ನೂ, 'ಲುಕಿಂಗ್ ಬ್ಯಾಕ್ ಇಂಟು ದಿ ಫ್ಯೂಚರ್: ಐಡೆಂಟಿಟಿ ಅಂಡ್ ಇನ್‌ಸರ್ಜನ್ಸಿ ಇನ್ ನಾರ್ಥ್ ಈಸ್ಟ್ ಇಂಡಿಯಾ' (2012) ಎಂಬ ವಿಶ್ಲೇಷಣಾತ್ಮಕ ದೀರ್ಘ ಪ್ರಬಂಧಗಳ ಸಂಕಲನವನ್ನೂ ಹೊರತಂದರು. ಅವರು ಕನ್ನಡದಲ್ಲಿ ಬ್ಲಾಗ್ ಆರಂಭಿಸಿ, ಅದರಲ್ಲಿ ಕನ್ನಡದ ಬರವಣಿಗೆಯನ್ನು ಮತ್ತೆ ಕೈಗೆತ್ತಿಕೊಳ್ಳಲು ಯತ್ನಿಸಿದರು.''

ಈ ವ್ಯಕ್ತಿಚಿತ್ರದಲ್ಲಿ ವೃತ್ತಿಜೀವನದ ಬಗ್ಗೆ ನಿರ್ಲಿಪ್ತ ಮಾಹಿತಿಗಳಿವೆ. ಜೊತೆಗೆ ವೈಯಕ್ತಿಕ ಬಾಳಿನ ಬಗ್ಗೆ ಮನೋವೈಜ್ಞಾನಿಕ ಎನ್ನಬಹುದಾದ ವಿಶ್ಲೇಷಣೆಯಿದ್ದು, ಅದರಲ್ಲಿ ವೈಫಲ್ಯ, ನಿರಾಶೆ–ವೇದನೆಗಳನ್ನು ಪ್ರಾಮಾಣಿಕವಾಗಿ ಹೇಳಿಕೊಳ್ಳಲಾಗಿದೆ. ಸೋಲಿನ ಕಾರಣಗಳನ್ನು ಹೊರಲೋಕಕ್ಕೆ ಬದಲಾಗಿ ತನ್ನೊಳಗೇ ಹುಡುಕಲಾಗಿದೆ. ಹೀಗಾಗಿ, ಬಾಳಿನ ಪ್ರತಿಫಲವನ್ನು ಉಣ್ಣಬೇಕಾಗಿದೆ ಎಂಬ ಅಸ್ತಿತ್ವವಾದಿ ನೋಟವಿದೆ. ಕನ್ನಡ ಲೇಖಕನಾಗಿ ತಮ್ಮನ್ನು 'ಮೈನರ್' ಎಂದುಕೊಳ್ಳುವಲ್ಲಿ ನಮ್ರತೆಯ ಸ್ವಮೌಲ್ಯಮಾಪನವಿದೆ. ಆದರೆ ಪತ್ರಿಕಾವೃತ್ತಿಯಲ್ಲಿ ಮಾಡಿದ ತಿರುಗಾಟಗಳ ಬಗ್ಗೆ ಸಾಧಿಸಿದ ತೃಪ್ತಿಯಿದೆ. ಆಫ್ರಿಕಾ ಖಂಡದ ಬಗ್ಗೆ ಹೇಳುವಾಗ, ಅದರ ಎಲ್ಲ ದಿಕ್ಕಿನ ದೇಶಗಳನ್ನು ತಿರುಗಿರುವ ಬಗೆಗಿನ ಹೆಮ್ಮೆ ಗಮನಿಸಬಹುದು. ಸದರಿ ಮೃತ್ಯುಪತ್ರವು ನವ್ಯದ ಸಣ್ಣಕತೆಯ ಪಾತ್ರವೊಂದರ ಸ್ವಗತದಂತೆಯೂ, ಕಾದಂಬರಿಯೊಂದರ ಭಾಗವಾಗಿ ಅಳವಟ್ಟಿರುವ ಡೈರಿಯಂತೆಯೂ ಕಾಣುತ್ತದೆ. ಕಾರಂತರ 'ಅಳಿದಮೇಲೆ' ಕಾದಂಬರಿಯ ಯಶವಂತರಾಯನು ಬಿಟ್ಟುಹೋದ ದಿನಚರಿ ಇಟ್ಟುಕೊಂಡು ಶಿವರಾಮಯ್ಯ, ಆತನ ಬಾಳಿನ ಅರ್ಥವನ್ನು ಹುಡುಕಿದನು. ಅದರಂತೆ ಕಾಮರೂಪಿಯವರ ವ್ಯಕ್ತಿತ್ವವನ್ನು ಅರಿಯಲು ಈ ಪತ್ರ ದಿಸೆ ತೋರುವಂತಿದೆ.

## 2

ತಮ್ಮ ರಾಜಕೀಯ ಚಿಂತನೆಯ ಗ್ರಂಥಗಳನ್ನೂ ಪತ್ರಿಕಾ ಬರಹಗಳನ್ನೂ ಮೂಲ ಹೆಸರಲ್ಲಿ ಬರೆಯುವ ಪ್ರಭಾಕರ, ತಮ್ಮ ಸೃಜನಶೀಲ ಬರಹಗಳನ್ನು ಬರೆಯಲು 'ಕಾಮರೂಪಿ' ಎಂಬ ಹೆಸರನ್ನು ಇಟ್ಟುಕೊಂಡಿದ್ದರು. ನವೋದಯದಲ್ಲಿ ಕಾವ್ಯನಾಮವು ಲೇಖಕರ ಲೌಕಿಕ ವ್ಯಕ್ತಿತ್ವದಿಂದ ಅವರ ಅಲೌಕಿಕ ಸೃಜನಶೀಲ ವ್ಯಕ್ತಿತ್ವವನ್ನು ಅಲಾಯಿದ ಮಾಡಿ ನೋಡುವ ಕಾವ್ಯಮೀಮಾಂಸೆಯ ಭಾಗ. ಆದರೆ ನವ್ಯಲೇಖಕರೆಲ್ಲರೂ ಸಾಂಕೇತಿಕವಾದ ಮತ್ತೊಂದು